ವಿಶ್ವವಾಣಿ

ಸಂಪಾದಕೀಯ

ಬರ ಪರಿಸ್ಥಿತಿ ನಿರ್ವಹಣೆ; ಅಧಿಕಾರಿಗಳ ಮೇಲಿದೆ ಹೊಣೆ

ರಾಜ್ಯದ 223 ತಾಲೂಕುಗಳಲ್ಲಿ ಬರಗಾಲ ತಾಂಡವವಾಡುತ್ತಿದೆ. ಅದರಲ್ಲೂ, 194 ತಾಲೂಕುಗಳು ತೀವ್ರ ಬರದ ಬರೆಗೆ ನಲುಗಿ ಹೋಗಿವೆ. ರೈತರಂತೂ ತಲೆಮೇಲೆ ಕೈ ಹೊತ್ತು ಕುಳಿತಿದ್ದಾರೆ. ಕುಟುಂಬಕ್ಕೆ ಕುಟುಂಬಗಳೇ ಗುಳೆ ಹೋಗುತ್ತಿವೆ. ಮಳೆ ಇಲ್ಲದೆ ಮುಂಗಾರು ಬೆಳೆ ಹಾನಿ, ಜಲಾಶಯ, ಕೆರೆಗಳಲ್ಲಿ ಹನಿ ನೀರಿಲ್ಲದೆ ಹಿಂಗಾರಿನಲ್ಲಿ ಬಿತ್ತನೆಯೇ ಆಗದಿರುವುದು ನಾಡಿನ ಬೆನ್ನೆಲುಬಾಗಿರುವ ರೈತರ ಬೆನ್ನೆಲುಬನ್ನೇ ಮುರಿದಂತಾಗಿದೆ. ಕುಡಿಯುವ ನೀರಿನ ಸಮಸ್ಯೆಯೂ ಒಕ್ಕರಿಸಿದೆ. 98 ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಕೆರೆ-ಕಟ್ಟೆಗಳು ಒಣಗಿಹೋಗಿ, ಬೋರ್‌ವೆಲ್‌ಗಳಲ್ಲೂ ಹನಿ ನೀರು ಬರದಂತಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇಡೀ ಸಚಿವ ಸಂಪುಟ ಬರ ನಿರ್ವಹಣೆಗಾಗಿ ಟೊಂಕಕಟ್ಟಿ ನಿಂತಿದೆ. ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಸೂಚನೆ ನೀಡಿದ್ದಾರೆ, ಸಹಾಯವಾಣಿ ಹಾಗೂ ಕಂಟ್ರೋಲ್ ರೂಂ ಸ್ಥಾಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆದರೆ ಬರ ನಿರ್ವಹಣೆಯ ವಿಚಾರದಲ್ಲಿ ಅಧಿಕಾರಿಗಳು ದಕ್ಷವಾಗಿ ಕಾರ್ಯನಿರ್ವಹಿಸದಿದ್ದರೆ ರಾಜ್ಯದ ಜನ ಪರದಾಡುವಂತಾಗುತ್ತದೆ. ಆದ್ದರಿಂದ ಅಧಿಕಾರಿಗಳು ಮೈಕೊಡವಿ ಎದ್ದೇಳಬೇಕು. ಕ್ಷಿಪ್ರವಾಗಿ ಪ್ರತಿದಿನ ಸರಿಯಾದ ಸಮಯಕ್ಕೆ ಗ್ರಾಮಗಳಿಗೆ ಕುಡಿಯು ನೀರು ಪೂರೈಕೆ ಮಾಡಬೇಕು. ಗ್ರಾಮೀಣ ಭಾಗದಲ್ಲಿ ಜನರಷ್ಟೇ ಜಾನುವಾರುಗಳ ಸಂಖ್ಯೆಯೂ ಇರುವುದರಿಂದ ಅವುಗಳಿಗೂ ಕುಡಿಯುವ ನೀರಿನ ಪೂರೈಕೆಗೆ ಕ್ರಮ ತೆಗೆದುಕೊಳ್ಳಬೇಕು. ಗ್ರಾಮಗಳ ಜತೆಗೆ ಪಟ್ಟಣಗಳು, ನಗರಗಳ ಕಡೆಗೂ ಗಮನ ಹರಿಸಬೇಕು. ಪಟ್ಟಣ, ನಗರ ಹಾಗೂ ಮಹಾ ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಲೇ ಟ್ಯಾಂಕರ್ ನೀರು ಪೂರೈಕೆಯ ದಂಧೆ ಶುರುವಾಗುತ್ತದೆ. ಈಗಾಗಲೇ ನಗರಗಳಲ್ಲಿ ಒಂದು ಟ್ಯಾಂಕರ್ ನೀರಿಗೆ 2-3 ಸಾವಿರ ರುಪಾಯಿ ವಸೂಲಿ ಮಾಡುತ್ತಿದ್ದಾರೆ. ಲೆಕ್ಕವಿಲ್ಲದಷ್ಟು ಬೋರ್‌ವೆಲ್‌ಗಳನ್ನು ಕೊರೆದು, ಜನರ ಬಳಿ 2-3 ಪಟ್ಟು ಹಣ ವಸೂಲಿ ಮಾಡುವ ದಂಧೆ ಆರಂಭವಾಗಿದೆ. ಈ ದಂಧೆಗೆ ಕಡಿವಾಣ ಹಾಕುವಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಖಡಕ್ ಸೂಚನೆ ಕೊಟ್ಟರೂ ಎಗ್ಗಿಲ್ಲದೆ ದಂಧೆ ಮುಂದುವರಿದೇ ಇದೆ. ಆದ್ದರಿಂದ ಅಧಿಕಾರಿಗಳು ನೀರಿನ ದಂಧೆಯಲ್ಲಿ ತೊಡಗಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

ಸೊಂಪಾದಕೀಯ

ಯಾತ್ರಾರ್ಥಿ ರಾಹುಲ್

ರಾಷ್ಟ್ರ ರಾಜಕಾರಣ ಚುರುಕಾಗುತ್ತಿದೆ. ಇದಕ್ಕೆ ಕಾರಣ ಸಮೀಪಿಸುತ್ತಿರುವ ಲೋಕಸಭಾ ಚುನಾವಣೆ. ಅತ್ತ ಬಿಜೆಪಿ ಉತ್ತರ ಭಾರತದಲ್ಲಿ ತನ್ನ ಪ್ರಭುತ್ವ ಸ್ಥಾಪಿಸಿ ಮೆರೆಯುತ್ತಿದ್ದರೆ ಇತ್ತ ವಿಪಕ್ಷಗಳು ಕೂಡಾ ಮೈಮರೆತು ಕೂತಿಲ್ಲ. ತಮ್ಮದೇ ಆದ ಶೈಲಿಯಲ್ಲಿ ಚುನಾವಣೆಗೆ ಸಜ್ಜಾಗುತ್ತಿವೆ. ಕಾಂಗ್ರೆಸ್ ನೇತೃತ್ವದ 'ಇಂಡಿಯ' ಒಕ್ಕೂಟ ಬಿಜೆಪಿಗೆ ಎಷ್ಟರ ಮಟ್ಟಿಗೆ ಸೆಡ್ಡು ಹೊಡೆಯಬಲ್ಲದೋ ಗೊತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಜನರೊಂದಿಗೆ ನೇರಸಂಪರ್ಕ ಸಾಧಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅದನ್ನು ಮುಂದುವರಿಸುವ ಹಾದಿಯಲ್ಲಿದ್ದಾರೆ. ಅವರಿಗಾಗಲಿ ಅಥವಾ ಇನ್ಯಾರಿಗೇ ಆಗಲಿ ಪ್ರಧಾನಿ ಅಭ್ಯರ್ಥಿ ಎಂಬ ಪಟ್ಟ ವಿಪಕ್ಷಗಳ ಒಕ್ಕೂಟದಲ್ಲಿ ಸಿಕ್ಕಿಲ್ಲ, ಹಾಗಾಗಿ ಅವರವರು ತಮ್ಮದೇ ಆದ ಹಾದಿಯಲ್ಲಿ ಚುನಾವಣೆಗೆ ರೆಡಿ ಆಗುತ್ತಿದ್ದಾರೆ. ರಾಹುಲ್ ಅವರದ್ದು ಚುನಾವಣಾ ನಿಟ್ಟಿನಲ್ಲಿನ ಯಾತ್ರೆ ಆಧರಿತ ಪ್ರಚಾರ. ಈ ಹಿಂದೆ ಭಾರತ್ ಜೋಡೋ, ಭಾರತ್ ಏಕತಾ ಯಾತ್ರೆ ಮಾಡಿದ್ದ ರಾಹುಲ್ ಈಗ ಭಾರತ್ ನ್ಯಾಯಯಾತ್ರೆ ಕೈಗೊಂಡಿದ್ದಾರೆ. ಈ ಮೊದಲು ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಕಾಶ್ಮೀರದವರೆಗೂ ಯಾತ್ರೆ ಮಾಡಿದ್ದ ರಾಹುಲ್ ಈಗ ಬಿಜೆಪಿಗೆ ಉತ್ತರ ಕೊಡೋಕೆ ಅಂತ ಭಾರತದ ಪೂರ್ವದಿಂದ ಪಶ್ಚಿಮದತ್ತ ಪಾದ ಬೆಳೆಸಲಿದ್ದಾರೆ. ಆದರೆ ಆ ವೇಳೆ ಬಸ್‌ನಲ್ಲಿ ಪ್ರಯಾಣ ಮಾಡಲಿದ್ದು, ನಡುನಡುವೆ ಅವರ ಟ್ರೇಡ್‌ಮಾರ್ಕ್ ಆದ ಕಾಲ್ನಡಿಗೆ ಇರಲಿದೆಯಂತೆ. ಮಣಿಪುರದಿಂದ ಮುಂಬೈವರೆಗಿನ ಈ 6,200 ಕಿ.ಮೀ. ಯಾತ್ರೆ ಲೋಕಸಭಾ ಚುನಾವಣೆ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆ ಅನ್ನೋದು ಕಾಂಗ್ರೆಸ್‌ನ ನಂಬಿಕೆ. ಆದರೆ ರಾಹುಲ್ ಈ ರೀತಿ ಯಾತ್ರೆ ಮಾಡಿಕೊಂಡಿರೋದನ್ನ ನೋಡಿ ಬಿಜೆಪಿಯವರು 'ಈ ಮನುಷ್ಯ ಸುಮ್ನೆ ಓಡಾಡ್ಕೊಂಡ್ ಇರ್ತಾನೆ' ಅಂತ ಆಡಿಕೊಳ್ಳದಿದ್ದರೆ ಸಾಕು! ಸಾಮಾನ್ಯವಾಗಿ ಚುನಾವಣಾ ರಾಜಕಾರಣದಿಂದ ನಿವೃತ್ತಿ ಪಡೆದವರು ತೀರ್ಥಯಾತ್ರೆ ಮಾಡ್ತಾರೆ. ಆದರೆ ಇನ್ನೂ ಅಧಿಕಾರದ ಆಸೆ ಇರೋ ರಾಹುಲ್ ಈ ವಯಸ್ಸಿನಲ್ಲಿ ಹೀಗೆ ಯಾತ್ರೆ ಮಾಡ್ಕೊಂಡ್ ಇರೋದ್ರಿಂದ ಏನಾದ್ರೂ ಲಾಭ ಇದೆಯೋ ಇಲ್ವೋ ಗೊತ್ತಿಲ್ಲ. ಹೋದ ಕಡೆಯೆಲ್ಲ ಜನರಿಂದ ಅವರಿಗೆ ಉತ್ತಮ ಸ್ಪಂದನೆಯಂತೂ ಸಿಗುತ್ತಿದೆ. ಆದರೆ, ಜನ ರಾಹುಲ್ ಜತೆ ಚೆನ್ನಾಗಿ ಮಾತನಾಡಿ, ವೋಟನ್ನ ಮಾತ್ರ ಮೋದಿಗೆ ಒತ್ತಿದರೆ ಅಲ್ಲಿಗೆ ರಾಹುಲ್ ಯಾತ್ರೆ ಹೊಳೆಯಲ್ಲಿ ತೊಳೆದ ಹುಣಿಸೇಹಣ್ಣು!

ಸಂಪಾದಕರ ಸದ್ಯಶೋಧನೆ

ಹಣ-ಬಿಜಿನೆಸ್-ಬದುಕು-ಬಫೆಟ್

ನನಗೆ ವಾರೆನ್ ಬಫೆಟ್ ಅಂದ್ರೆ ಇಷ್ಟ. ಆತ ಜಗತ್ತಿನ ಅತ್ಯಂತ ಶ್ರೀಮಂತರಲ್ಲೊಬ್ಬ ಎಂಬ ಕಾರಣಕ್ಕಲ್ಲ. ಶ್ರೀಮಂತನಾದರೂ ಸಾಮಾನ್ಯನಂತೆ ಬದುಕುತ್ತಿರುವ ಆತನ ಜೀವನಕ್ರಮ ಎಂಥವರಿಗೂ ಇಷ್ಟವಾಗುತ್ತದೆ. ಇಲ್ಲಿ ತನಕ ತಾನು ಗಳಿಸಿದ ಹಣದಲ್ಲಿ ಶೇ.70ರಷ್ಟು ಭಾಗವನ್ನು ಆತ ಧರ್ಮಕಾರ್ಯಗಳಿಗೆ (ಚಾರಿಟಿಗೆ) ನೀಡಿದ್ದಾನೆ. ಕೊನೆಯುಸಿರೆಳೆವ ಹೊತ್ತಿಗೆ ತನ್ನ ಸಂಪತ್ತಿನ ಪೈಕಿ ಶೇ.1ರಷ್ಟು ಹಣವನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ಚಾರಿಟಿಗೆ ನೀಡಬೇಕೆಂಬುದು ಆತನ ಹಂಬಲವಂತೆ. 'ನನ್ನ ಬೇಡಿಕೆಗಳು ಸರಳ. 40 ವರ್ಷದವನಾಗಿದ್ದಾಗ ನನ್ನಲ್ಲಿ ಏನಿತ್ತೋ, ಅಷ್ಟಕ್ಕೇ ನಾನು ನೆಮ್ಮದಿಯಾಗಿದ್ದರೆ, ಈ 90ನೇ ವಯಸ್ಸಿನಲ್ಲಿ ನಾನು ಅದಕ್ಕಿಂತ ಹತ್ತು ಪಟ್ಟು ನೆಮ್ಮದಿಯಿಂದ ಇರಬೇಕಲ್ಲವೇ? ಆದರೆ ನಾನು ನೂರು ಪಟ್ಟು ಹೆಚ್ಚು ಸಂತೃಪ್ತನಾಗಿದ್ದೇನೆ' ಎಂಬ ಬಫೆಟ್ ಮಾತುಗಳಲ್ಲಿ ಆತನ ಜೀವನ ಸಿದ್ಧಾಂತವಿದೆ. 'ನಾವು ಗಳಿಸುವ ಹಣ, ಸಂಪತ್ತು ನಮ್ಮನ್ನು ಮತ್ತಷ್ಟು ದುರಾಸೆಗೆ ನೂಕಿದರೆ, ನಮಗೆ ನೆಮ್ಮದಿ ನೀಡದಿದ್ದರೆ ಆ ಗಳಿಕೆ, ಸಂಪತ್ತಿಗೆ ಏನು ಬೆಲೆ?' ಎಂದು ಕೇಳುವ ಬಫೆಟ್ ಸಿದ್ಧಾಂತ ಇಷ್ಟವಾಗುತ್ತದೆ. 'ಜೀವನವಿರುವುದೇ ಹೀಗೆ. ಏನಿದೆಯೋ ಅದರಲ್ಲಿ ತೃಪ್ತಿ ಕಾಣಬೇಕು. ಆದರೆ ನಮ್ಮ ಪರಿಶ್ರಮವನ್ನು ನಿಲ್ಲಿಸಬಾರದು. ನಾವು ನಮಗೆ ಮಾತ್ರ ಅಲ್ಲ, ಇತರರಿಗೆ ಮತ್ತು ಸಮಾಜಕ್ಕೂ ಬದುಕಬೇಕು' ಎನ್ನುವುದು ಆತನ ಕರ್ಮಸಿದ್ಧಾಂತ. ಒಮ್ಮೆ ಬಫೆಟ್ ಹೇಳಿದ್ದ- 'ನಾನು ದುಬಾರಿ ಸೂಟ್‌ಗಳನ್ನು ಧರಿಸುವುದಿಲ್ಲ, ಕಾರಣ ಎಷ್ಟೇ ದುಬಾರಿ ಸೂಟ್ ಧರಿಸಿದರೂ, ನನ್ನ ಮೈ ಮೇಲೆ ಇದ್ದಾಗ ಅವು ಚೀಪ್ ಆಗಿ ಕಾಣುತ್ತವೆ. ಬಫೆಟ್ ಹತ್ರ ಇಷ್ಟೆಲ್ಲ ಹಣವಿದೆ, ಇನ್ನೂ ದುಬಾರಿ ಸೂಟ್ ಹಾಕಬಹುದಿತ್ತಲ್ಲ ಎಂದು ಜನ ಯೋಚಿಸುತ್ತಾರೆ. ಒಂದೊಮ್ಮೆ ನಾನು ಮಿಲಿಯನ್ ಡಾಲರ್ ಬೆಲೆ ಬಾಳುವ ಸೂಟ್ ಧರಿಸಿದರೂ ಹಾಗೆ ಯೋಚಿಸುತ್ತಾರೆ. ಹೀಗಾಗಿ ನಾನು ನನ್ನ ಸೂಟ್ ಮತ್ತು ಕಾರಿನ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ'. ತಾನು ಗಳಿಸಿದ್ದನ್ನು ಪದೇ ಪದೆ ಚಾರಿಟಿಗೆ ನೀಡುವ ಬಫೆಟ್ ಬಗ್ಗೆ ಕೆಲವರು ಬೇರೆ ರೀತಿಯಾಗಿ ಯೋಚಿಸುವುದೂ ಉಂಟು. 'ಪ್ರಾಯಶಃ ಆ ಮನುಷ್ಯನಿಗೆ ಹಣದ ಮೇಲೆ ಮೋಹ ಇರಲಿಕ್ಕಿಲ್ಲ, ದುಡಿದಿದ್ದನ್ನೆಲ್ಲ ದಾನ ಮಾಡುತ್ತಾನೆ' ಎಂದು ಅಂದುಕೊಳ್ಳಬಹುದು. ಆದರೆ ಬಫೆಟ್ ಈ ಕುರಿತು ಹೀಗೆನ್ನುತ್ತಾನೆ- 'ಗಳಿಸಿದ್ದನ್ನೆಲ್ಲ ದಾನ ಮಾಡುವುದರಿಂದ ನನಗೆ ಹಣದ ಮೇಲೆ ಮೋಹವಿರಲಿಕ್ಕಿಲ್ಲ ಎಂದು ಅನೇಕರು ಭಾವಿಸಿರಬಹುದು. ಒಂದೊಮ್ಮೆ ಯಾರಾದರೂ ಹಾಗೆ ಭಾವಿಸಿದರೆ ಅವರು ತಪ್ಪು. ನನಗೆ ಹಣದ ಮೇಲೆ ವಿಶೇಷ ಮಮತೆ. ಜೀವನದಲ್ಲಿರೋದೇ 2 ನಿಯಮಗಳು. Rule No.1: Never lose money. Rule No.2: Never forget rule No.1. ಇದರ ಹೊರತಾಗಿ ಹಣದ ಬಗ್ಗೆ ಮಾತಾಡುವುದೇನೂ ಇಲ್ಲ'. ಬಫೆಟ್ ಆತ್ಮವಿಶ್ವಾಸದ ಬಗ್ಗೆ ಎಂಥವರಿಗಾದರೂ ಆಶ್ಚರ್ಯವಾಗುತ್ತದೆ. ಒಮ್ಮೆ ಆತ ಹೇಳಿದ್ದ- 'ಜೀವನದಲ್ಲಿ ನಾನು ಅತಿ ಶ್ರೀಮಂತ ವ್ಯಕ್ತಿಯಾಗುತ್ತೇನೆ ಎಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಕಾರಣ ನಾನು ಆ ದಿಸೆಯಲ್ಲಿ ಹಗಲಿರುಳೂ ದುಡಿಯುತ್ತಿದ್ದೆ. ನನ್ನ ಸಾಮರ್ಥ್ಯದ ಬಗ್ಗೆ ನನಗೆ ಸ್ವಲ್ಪವೂ ಸಂದೇಹವಿರಲಿಲ್ಲ. ಬಿಜಿನೆಸ್‌ನಲ್ಲಿ ಹಲವರು ತಮ್ಮ ಹಿಂದಿನ ಅನುಭವಗಳನ್ನೇ ಹೇಳುತ್ತಿರುತ್ತಾರೆ. ಪ್ರತಿ ಉದ್ಯಮವೂ ಬೇರೆ ಬೇರೆ. ಕಾಲ ಕ್ಷಣಕ್ಷಣವೂ ಬದಲಾಗುತ್ತಿರುತ್ತದೆ. ಹೀಗಾಗಿ ನೀವು ಹಳೆಯದನ್ನೇ ಮಾತಾಡುತ್ತಿದ್ದರೆ ಪ್ರಯೋಜನವಿಲ್ಲ. ಶ್ರೀಮಂತರೆಲ್ಲ ಹಾಗೆ ಮಾಡುತ್ತಿದ್ದರೆ, ಇಂದು ಅವರೆಲ್ಲ ಗ್ರಂಥಪಾಲಕ (ಲೈಬ್ರರಿಯನ್) ರಾಗಿರುತ್ತಿದ್ದರು'. ಬಫೆಟ್‌ನ ಈ ಮಾತು ನನಗೆ ಆಗಾಗ ನೆನಪಾಗುತ್ತದೆ- 'ನೀವು ಯಾವ ಕೆಲಸವನ್ನು ಯಾವಾಗ ಮಾಡಬೇಕು ಎಂಬುದು ಬಹಳ ಮುಖ್ಯ. ಬುದ್ಧಿವಂತರಾದವರು ಇಂದು ಮಾಡುವುದನ್ನು ದಡ್ಡರಾದವರು ಕೊನೆಯಲ್ಲಿ ಮಾಡುತ್ತಾರೆ'. ಬಫೆಟ್ ಆಗಾಗ ಇನ್ನೊಂದು ಆಣಿಮುತ್ತನ್ನು ಉದುರಿಸುತ್ತಾನೆ- 'ನಾನು ಯುವಕನಾಗಿದ್ದಾಗ, ಕಾರು ಮತ್ತು ಹುಡುಗಿಯರ ಬಗ್ಗೆ ಯೋಚಿಸುತ್ತಿದ್ದೆ. ನನಗೆ ಹುಡುಗಿಯರನ್ನು ಪಟಾಯಿಸಲು ಆಗಲಿಲ್ಲ, ಹೀಗಾಗಿ ಕಾರನ್ನು ಖರೀದಿಸಿದೆ. ಕಾರನ್ನು ನೋಡಿ ಹುಡುಗಿಯರು ಬರಲಾರಂಭಿಸಿದರು. ಬದುಕು ಮತ್ತು ಬಿಜಿನೆಸ್ ಕೂಡ ಹೀಗೆ. ಒಂದನ್ನು ಪಡೆಯಲು, ಇನ್ನೊಂದರ ಹಿಂದೆ ಹೋಗಬೇಕಾಗುತ್ತದೆ'.

ಆಲೂಗಡ್ಡೆಯಂತೆ ಕಾಣಿಸಿದ್ದು ನಿಜಕ್ಕೂ ಆಲೂಗಡ್ಡೆಯಾ, ಬಾಂಬಾ?

ಎಲ್ಲವುಗಳಿಗೆ ಕಾರಣ ಹುಡುಕಬೇಕಾದ ಅಗತ್ಯವಿರುವುದಿಲ್ಲ. ಯಾಕೆಂದರೆ ಕೆಲವು ಸಂಗತಿಗಳಿಗೆ ಕಾರಣವೇ ಇರುವುದಿಲ್ಲ. ಹುಡುಕಿದರೂ ಸಿಗುವುದಿಲ್ಲ. ತಾನು ಹೊಸ ವನ್ಯಜೀವಿಧಾಮ ಘೋಷಿಸಿದ್ದರಿಂದ ಅಲ್ಲಿನ ವನ್ಯಜೀವಿಗಳು ಸುರಕ್ಷಿತವಾಗಿ ಇರುವಂತಾಗಿದೆ ಎಂದು ನಾಯಕನಾದವನು ಯೋಚಿಸುತ್ತಿರುತ್ತಾನೆ. ಆದರೆ ಕಾಡಿನಲ್ಲಿರುವ ವನ್ಯಜೀವಿಗಳಿಗೆ ಸರಕಾರ ಎಂಬ ವ್ಯವಸ್ಥೆ ಇದೆ ಎಂಬುದೂ ಗೊತ್ತಿರುವುದಿಲ್ಲ.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vveditoped@gmail.com

ಮ್ಯಾನೇಜ್‌ಮೆಂಟ್ ಗುರು ಪ್ರಕಾಶ ಅಯ್ಯರ್ ಶಿಫಾರಸಿನ ಮೇರೆಗೆ, ನಾನು ಕಳೆದ ವರ್ಷ ಒಂದು ಪುಸ್ತಕವನ್ನು ಓದಿದ್ದೆ. ತಮ್ಮ ಕೃತಿಯೊಂದರಲ್ಲಿ ಅಯ್ಯರ್ ಆ ಪುಸ್ತಕವನ್ನು ಆಧರಿಸಿ ಒಂದು ಅಧ್ಯಾಯವನ್ನು ಸಹ ಬರೆದಿದ್ದಾರೆ. ಅಂದ ಹಾಗೆ ಆ ಪುಸ್ತಕದ ಹೆಸರು The Art of Thinking Clearly. ಈ ಕೃತಿಯನ್ನು ಬರೆದವನು ರಾಲ್ಫ್ ಡೊಬೆಲ್ಲಿ, ಈತ ಮೂಲತಃ ಸ್ವಿಜರ್‌ಲ್ಯಾಂಡಿನವನು. ಈತ ಈ ಪುಸ್ತಕವನ್ನು ಬರೆದು ಹನ್ನೊಂದು ವರ್ಷಗಳಾದವು. ಈಗಲೂ ಈ ಪುಸ್ತಕ ಬೆಸ್ಟ್ ಸೆಲ್ಲರ್. ನನಗೆ ಆ ಲೇಖಕ ಪರಿಚಯವಾಗಿದ್ದು ನಾಲ್ಕು ವರ್ಷಗಳ ಹಿಂದೆ ಆತ ಬರೆದ Stop Reading the News: How to cope with the information overload and think more clearly ಕೃತಿಯ ಮೂಲಕ. Stop Reading the News ಪುಸ್ತಕ ಓದಿದ ಬಳಿಕ ಆತ ಬರೆದ ಇನ್ನೆರಡು ಪುಸ್ತಕಗಳನ್ನು ಓದಿದೆ. ಅಂದ ಹಾಗೆ ಆತನ ಇನ್ನೊಂದು ಪುಸ್ತಕ The Art of the Good Life ಕೂಡ ಸಾಕಷ್ಟು ಸುದ್ದಿ ಮಾಡಿತ್ತು.

ಚೈನಾ ಟಿವಿಗೆ ನೀಡಿದ ಸಂದರ್ಶನದಲ್ಲಿ ಡೊಬೆಲ್ಲಿ, 'ಹತ್ತು ವರ್ಷಗಳ ಹಿಂದೆ, ನಾನು ಪತ್ರಿಕೆಯನ್ನು ಓದಬಾರದು, ಟಿವಿಯಲ್ಲಾಗಲಿ, ಆನ್‌ಲೈನ್ ಮಾಧ್ಯಮದ ಮೂಲಕವಾಗಲಿ ಸುದ್ದಿಯನ್ನು ಓದಲೇಬಾರದು ಎಂದು ನಿರ್ಧರಿಸಿದೆ. ಇದರಿಂದ ನಾನು ಸಾಕಷ್ಟು ಸಮಯವನ್ನು ಉಳಿತಾಯ ಮಾಡಿದೆ. ನನ್ನ ಏಕಾಗ್ರತೆಯನ್ನು ಜಾಸ್ತಿ ಮಾಡಿಕೊಂಡೆ. ನನ್ನಲ್ಲಿ ಉದ್ವಿಗ್ನತೆ ಕಡಿಮೆಯಾಯಿತು. ಇದರಿಂದ ಜೀವನದಲ್ಲಿ ನಾನು ಏನನ್ನೋ ಕಳೆದುಕೊಂಡೆ ಎಂಬ ಭಾವ ಸ್ವಲ್ಪವೂ ಕಾಡಲಿಲ್ಲ. ಪತ್ರಿಕೆ ಮತ್ತು ಟಿವಿಯಲ್ಲಿ ಸುದ್ದಿಯನ್ನು ಓದುವುದರಿಂದ, ವೀಕ್ಷಿಸುವುದರಿಂದ ಮೂಲಭೂತವಾಗಿ ಜಗತ್ತನ್ನು ಅರ್ಥೈಸಿಕೊಳ್ಳಲು ಸಹಾಯಕವಾಗುವುದಿಲ್ಲ, ಹೆಚ್ಚು ಹೆಚ್ಚು ಸುದ್ದಿಯ ಹಿಂದೆ ಬಿದ್ದರೆ ನೀವು ಸಿನಿಕರಾಗುತ್ತೀರಿ, ನಿಮ್ಮಲ್ಲಿ ಚಡಪಡಿಕೆ ತೀವ್ರವಾಗುತ್ತದೆ. ಸುದ್ದಿ ಅಂದ್ರೆ ನಿಮ್ಮ ಮಿದುಳಿಗೆ ಹಿಡಿದ ಒಂದು ರೋಗ' ಎಂದು ಹೇಳಿ ದಂಗುಬಡಿಸಿದ್ದ. ಈ ಚಿಂತನೆಯ ಫಲವೇ ಆತನ Stop Reading the News ಎಂಬ ಪುಸ್ತಕ. ಅದನ್ನು ಓದಿದರೆ ಒಂದು ಕ್ಷಣ ಪತ್ರಿಕೆ ಓದುವುದೇ ಒಂದು ವ್ಯಸನ ಎನಿಸಿಬಿಡಬೇಕು, ಆ ರೀತಿ ಆತ ವಾದ ಮಾಡಿದ್ದಾನೆ.

The Art of Thinking Clearly ಪುಸ್ತಕದಲ್ಲಿ ಡೊಬೆಲ್ಲಿ ಒಂದು ಸ್ವಾರಸ್ಯಕರ ಕತೆಯನ್ನು ಹೇಳಿದ್ದಾನೆ. ಇದು ಮೂಲತಃ ನಾಯಕರಾದವರ ಸ್ವಭಾವ ಮತ್ತು ನಡವಳಿಕೆಗೆ ಸಂಬಂಧಿಸಿದ ಕತೆ. ಇದನ್ನು ನಮ್ಮ ಜೀವನಕ್ಕೂ ಅನ್ವಯಿಸಿಕೊಳ್ಳಬಹುದು. ನಮ್ಮ ಹುಬ್ಬಳ್ಳಿ, ಮಂಗಳೂರಿನಂಥ ಒಂದು ನಗರದಲ್ಲಿ ಒಬ್ಬನಿದ್ದ. ಆತ ಹಳದಿ ಶರ್ಟ್ ಮತ್ತು ಕೆಂಪು ಹ್ಯಾಟ್ ಧರಿಸಿ, ಪ್ರತಿದಿನ ಬೆಳಗ್ಗೆ ಒಂಬತ್ತು ಗಂಟೆಗೆ ಅಲ್ಲಿನ ಬಿಜಿ ಟ್ರಾಫಿಕ್ ಜಂಕ್ಷನ್ ಬಳಿ ಬಂದು, ಅಲ್ಲಿ ಸೇರಿದ ಜನರತ್ತ ತನ್ನ ಹ್ಯಾಟ್‌ನಿಂದ ಕೈ ಬೀಸುತ್ತಿದ್ದ. ಸುಮಾರು ಹದಿನೈದು-ಇಪ್ಪತ್ತು ನಿಮಿಷಗಳ ಕಾಲ ಹೀಗೆ ಮಾಡಿ, ಫಕ್ಕನೆ ಅದೃಶ್ಯನಾಗಿಬಿಡುತ್ತಿದ್ದ. ಆತ ಬರುವುದನ್ನು, ನಿಶ್ಚಿತ ಜಾಗದಲ್ಲಿ ನಿಂತು ಕೈ ಬೀಸುವುದನ್ನು ಜನ ನೋಡುತ್ತಿದ್ದರು. ಆದರೆ ಯಾವ ಕ್ಷಣದಲ್ಲಿ ನಾಪತ್ತೆಯಾದ ಎಂಬುದು ಮಾತ್ರ ಯಾರಿಗೂ ಗೊತ್ತಾಗುತ್ತಿರಲಿಲ್ಲ. 'ಈಗ ತಾನೇ ಅವನನ್ನು ನೋಡಿದೆವು. ತನ್ನ ಹ್ಯಾಟಿನಿಂದ ಜನರತ್ತ ಕೈಬೀಸುತ್ತಿದ್ದ. ಈಗೆಲ್ಲಿ ಹೊರಟು ಹೋದನೋ?' ಎಂದು ಎಲ್ಲರೂ ತಮ್ಮ ತಮ್ಮಲ್ಲಿಯೇ ಗೊಣಗಿಕೊಳ್ಳುತ್ತಿದ್ದರು.

ಒಂದು ದಿನ ಪೊಲೀಸ್ ಕಾನ್‌ಸ್ಟೇಬಲ್ ಆತನ ಬಳಿ ಹೋದ. ಆತನ ಮರ್ಮವೇನು ಎಂದು ತಿಳಿಯುವ ಕುತೂಹಲ ಅವನಿಗೂ ಇತ್ತು. 'ಪ್ರತಿದಿನ ನೀನು ಇಲ್ಲಿ ಏನು ಮಾಡುತ್ತೀಯಾ?' ಎಂದು ಕಾನ್‌ಸ್ಟೇಬಲ್ ಕೇಳಿದ. ಅದಕ್ಕೆ ಆ ಹ್ಯಾಟುಧಾರಿ, 'ನಾನು ನಿತ್ಯವೂ ಇಲ್ಲಿಗೆ ಬರುವ ಫೋಂಡಾಮೃಗಳನ್ನು ಓಡಿಸುತ್ತೇನೆ' ಎಂದ. ಆತನ ಉತ್ತರ ಕೇಳಿ ಆಶ್ಚರ್ಯಚಕಿತನಾದ ಕಾನ್‌ಸ್ಟೇಬಲ್, 'ಫೋಂಡಾಮೃಗಗಳಾ? ಏನು ಹೇಳ್ತಾ ಇದ್ದೀಯಾ? ಇಲ್ಲಿ ಫೋಂಡಾಮೃಗಳು ಬರುವುದುಂಟಾ? ನಾನೂ ಇಲ್ಲಿಯೇ ಸನಿಹದಲ್ಲಿ ಡ್ಯೂಟಿ ಮಾಡ್ತೇನೆ. ಇಲ್ಲಿ ಫೋಂಡಾಮೃಗಗಳು ಬಂದಿದ್ದನ್ನು ನಾನಂತೂ ನೋಡಿಲ್ಲ. ಹೀಗಿರುವಾಗ ನೀನು ಅವುಗಳನ್ನು ಓಡಿಸುವ ಪ್ರಶ್ನೆಯೇ ಇಲ್ಲವಲ್ಲ?' ಎಂದ. ಅದಕ್ಕೆ ಆ ಹ್ಯಾಟುಧಾರಿ, 'ನೋಡಿದ್ರಾ? ನಾನು ಫೋಂಡಾಮೃಗಗಳನ್ನು ನಿಯಂತ್ರಿಸುವ ಕೆಲಸವನ್ನು ಮಾಡುತ್ತಿರುವುದರಿಂದ ನಿಮಗೆ ಅವು ಕಂಡಿಲ್ಲ. ಒಂದು ವೇಳೆ ನಾನು ಇಲ್ಲಿ ಇಲ್ಲದಿದ್ದರೆ ಏನಾಗ್ತಾ ಇತ್ತು ಕತೆ? ಫೋಂಡಾಮೃಗಳನ್ನು ನೋಡಿ ಜನ ದಿಕ್ಕಾಪ